**All India Radio: Bangalore**
**National Bulletin In Kannada**
**16.09.2026 7.35 am**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

**<><><*><><<>**

ಮುಖ್ಯಾಂಶಗಳು

**೧. ವ್ಯಕ್ತಿಯಿಂದ ವ್ಯಕ್ತಿಗೆ ನಡೆಯುವ ಯುಪಿಐ ವಹಿವಾಟುಗಳಿಗೆ ಯಾವುದೇ ಶುಲ್ಕ ಇಲ್ಲ _ ಕೇಂದ್ರ ಹಣಕಾಸು ಸಚಿವಾಲಯ ಸ್ಪಷ್ಟನೆ**

**೨. ನಾಗರಿಕರು ಅಥವಾ ನಾಗರಿಕ ಸೌಲಭ್ಯಗಳ ಮೇಲೆ ನಡೆಯುವ ಯಾವುದೇ ದಾಳಿ ಖಂಡನೀಯ - ಭಾರತ**

**೩. ಇಂಧನ ಮೂಲಸೌಕರ್ಯಗಳ ಮೇಲೆ ರಷ್ಯಾ-ಉಕ್ರೇನ್ ಪರಸ್ಪರ ದಾಳಿ**

**೪. ಟಿ-೨೦ ಕ್ರಿಕೆಟ್: ಅಫ್ಘಾನಿಸ್ತಾನ ತಂಡದ ವಿರುದ್ಧ ಗೆದ್ದು ಸರಣಿ ವಶಪಡಿಸಿಕೊಂಡ ಭಾರತ**

**<><><*><><<>**

ವರ್ಗಾಯಿಸಲಾದ ಮೊತ್ತದ ಹೊರತಾಗಿಯೂ, ವ್ಯಕ್ತಿಯಿಂದ ವ್ಯಕ್ತಿಗೆ ನಡೆಯುವ ಯುಪಿಐ ವಹಿವಾಟುಗಳಿಗೆ ಯಾವುದೇ ಶುಲ್ಕವಿರುವುದಿಲ್ಲ ಎಂದು ಕೇಂದ್ರ ಹಣಕಾಸು ಸಚಿವಾಲಯ ಸ್ಪಷ್ಟಪಡಿಸಿದೆ. ಸಣ್ಣ ವ್ಯಾಪಾರಿಗಳಿಗೆ ಅನ್ವಯವಾಗುವ 'ಶೂನ್ಯ ಮರ್ಚೆಂಟ್ ಡಿಸ್ಕೌಂಟ್ ರೇಟ್' ಚೌಕಟ್ಟಿನಡಿ ಬರುವ ವಹಿವಾಟುಗಳು ಹಾಗೂ ಎರಡು ಸಾವಿರ ರೂಪಾಯಿಗಳವರೆಗಿನ ವ್ಯಾಪಾರಿ ಪಾವತಿಗಳು ಕೂಡ ಉಚಿತವಾಗಿ ಮುಂದುವರಿಯಲಿವೆ. ಇದರ ಪರಿಣಾಮವಾಗಿ, ಒಟ್ಟು ವಹಿವಾಟುಗಳಲ್ಲಿ ಸುಮಾರು ಶೇಕಡಾ ೯೭ ರಷ್ಟು ವಹಿವಾಟುಗಳ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಎರಡು ಸಾವಿರ ರೂಪಾಯಿಗಳಿಗಿಂತ ಹೆಚ್ಚಿನ ನಿರ್ದಿಷ್ಟ ವ್ಯಾಪಾರಿ ವಹಿವಾಟುಗಳಿಗೆ ಮಾತ್ರ ಎಂಡಿಆರ್ ಅನ್ವಯಿಸುತ್ತದೆ ಎಂದು ಸಚಿವಾಲಯ ತಿಳಿಸಿದೆ. ಎಂಡಿಆರ್ ಎಂಬುದು ಸರ್ಕಾರ ಅಥವಾ ನ್ಯಾಷನಲ್ ಪೇಮೆಂಟ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ ಸಂಗ್ರಹಿಸುವ ತೆರಿಗೆ ಅಥವಾ ಶುಲ್ಕವಲ್ಲ. ಯುಪಿಐ ವ್ಯವಸ್ಥೆಯ ಕಾರ್ಯಾಚರಣೆ ಮತ್ತು ನಿರಂತರ ವಿಸ್ತರಣೆ ಬೆಂಬಲಿಸಲು, ಬ್ಯಾಂಕುಗಳು ಮತ್ತು ಪಾವತಿ ಅಪ್ಲಿಕೇಶನ್ ಒದಗಿಸುವವರು ಸೇರಿದಂತೆ ಪಾವತಿ ವ್ಯವಸ್ಥೆಯಲ್ಲಿ ಭಾಗವಹಿಸುವವರ ನಡುವೆ ಇದನ್ನು ಹಂಚಲಾಗುತ್ತದೆ. ಗ್ರಾಹಕರಿಗೆ ಯುಪಿಐ ಸೇವೆಯನ್ನು ಉಚಿತವಾಗಿ ಮುಂದುವರಿಸುವ ಜೊತೆಗೆ, ಆಯ್ದ ವ್ಯಾಪಾರಿ ವಹಿವಾಟುಗಳ ಮೇಲೆ ಪರಿಷ್ಕೃತ ಯುಪಿಐ ಮರ್ಚೆಂಟ್ ಡಿಸ್ಕೌಂಟ್ ರೇಟ್ ಚೌಕಟ್ಟನ್ನು ಮುಂದಿನ ತಿಂಗಳ ೧೫ ರಿಂದ ಜಾರಿಗೆ ತರಲಾಗಿದೆ. ಒಟ್ಟು ಎಂಡಿಆರ್ ಸಂಗ್ರಹದ ಶೇಕಡಾ ೫ ರಷ್ಟು ಕೊಡುಗೆಯೊಂದಿಗೆ, ಸಣ್ಣ ವ್ಯಾಪಾರಿಗಳು ಯುಪಿಐ ಬಳಕೆಯನ್ನು ಉತ್ತೇಜಿಸಲು ಮೀಸಲಾದ ನಿಧಿಯನ್ನು ಸ್ಥಾಪಿಸಲಾಗುವುದು ಎಂದು ಹಣಕಾಸು ಸಚಿವಾಲಯ ತಿಳಿಸಿದೆ.

**<><><*><><<>**

ನವದೆಹಲಿಯಲ್ಲಿನ ೧೮ನೇ ಬ್ರಿಕ್ಸ್ ಸಭೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ಚೀನಾ ಅಧ್ಯಕ್ಷ ಕ್ಸಿ ಜಿನ್ ಪಿಂಗ್ ಅವರ ನಡುವೆ ಹಲವಾರು ಮಹತ್ವದ ವಿಷಯಗಳು ಚರ್ಚೆಯಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.ಎರಡೂ ದೇಶಗಳು ಪರಸ್ಪರ ಮೂರು ಪ್ರಮುಖ ಅಂಶಗಳಾದ ಪರಸ್ಪರ ಗೌರವ, ಪರಸ್ಪರ ಆಸಕ್ತಿ ಮತ್ತು ಪರಸ್ಪರ ಸೂಕ್ಷ್ಮತೆಯಿಂದ ನಡೆದುಕೊಳ್ಳಬೇಕು ಎಂಬುದರ ಬಗ್ಗೆ ಚರ್ಚಿಸಲಾಗಿದೆ ಎಂದರು. ಓಮನ್ ತೀರದಲ್ಲಿ ಭಾರತೀಯ ವಾಣಿಜ್ಯ ನೌಕೆ ಮೇಲೆ ನಡೆದ ದಾಳಿಯ ಬಗೆಗಿನ ಪ್ರಶ್ನೆಗೆ ಉತ್ತರಿಸಿದ ಜೈಸ್ವಾಲ್, ಭಾರತದ ಯಾವುದೇ ವಾಣಿಜ್ಯ ನೌಕೆ ಸುರಕ್ಷಿತ ನೌಕಾಯಾನ, ನಾಗರಿಕರ ಮೇಲೆ ಅಥವಾ ನಾಗರಿಕ ಸೌಲಭ್ಯಗಳ ಮೇಲೆ ನಡೆಯುವ ಯಾವುದೇ ದಾಳಿಯನ್ನು ಭಾರತ ಒಪ್ಪುವುದಿಲ್ಲ. ಅಂತಾರಾಷ್ಟ್ರೀಯ ಜಲಮಾರ್ಗಗಳಲ್ಲಿ ಈ ಹಿಂದಿನಂತೆ ಶಾಂತಿಯುತವಾಗಿ ವಾಣಿಜ್ಯ ವ್ಯವಹಾರಗಳನ್ನು ನಡೆಸಲು ಭಾರತ ಒತ್ತಾಯಿಸುತ್ತದೆ ಎಂದು ಹೇಳಿದ್ದಾರೆ.  ಓಮನ್ ತೀರದಲ್ಲಿ ದಾಳಿಗೊಳಗಾದ ನೌಕೆಯ ಮೇಲೆ ಪನಾಮ ದೇಶದ ಧ್ವಜವಿದ್ದು, ೧೪ ಮಂದಿ ಭಾರತೀಯರು ಈ ನೌಕೆಯಲ್ಲಿದ್ದರು. ದಾಳಿಯ ನಡುವೆಯೂ ೧೩ ಭಾರತೀಯರನ್ನು ರಕ್ಷಿಸಿದ್ದು, ಒಬ್ಬ ಭಾರತೀಯ ಕಾಣೆಯಾಗಿದ್ದಾರೆ. ಭಾರತೀಯ ರಾಯಭಾರ ಕಚೇರಿ ನಿಕಟವಾಗಿ ಈ ಘಟನೆಯನ್ನು ನಿರ್ವಹಿಸುತ್ತಿದೆ ಎಂದು ಅವರು ತಿಳಿಸಿದ್ದಾರೆ.  ಜೈಶ್-ಇ-ಮೊಹಮ್ಮದ್ ಸಂಘಟನೆಯ ಮುಖ್ಯಸ್ಥ ಮಸೂದ್ ಅಜರ್ ತಲೆಯ ಮೇಲೆ ಪಾಕಿಸ್ತಾನ ಸರ್ಕಾರ ೭೦ ಲಕ್ಷ ಪಾಕಿಸ್ತಾನಿ ರೂಪಾಯಿ ಬಹುಮಾನ ಘೋಷಿಸಿರುವ ಬಗೆಗೆ ಕೇಳಲಾದ ಪ್ರಶ್ನೆಗೆ ಪ್ರತಿಕ್ರಿಯಿಸಿದ ರಣಧೀರ್ ಜೈಸ್ವಾಲ್, ಇಂತಹ ಕಣ್ಣೊರೆಸುವ ಪಾಕಿಸ್ತಾನದ ತಂತ್ರಗಳು ಭಾರತಕ್ಕೆ ಹೊಸದೇನಿಲ್ಲ. ಇಂತಹ ಘೋಷಣೆಗಳನ್ನು ಮಾಡುವ ಬದಲು ಪಾಕಿಸ್ತಾನ ಉಗ್ರರ ವಿರುದ್ಧ ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

**<><><*><><<>**

ರಷ್ಯಾ ಮತ್ತು ಉಕ್ರೇನ್ ಇಂಧನ ಮೂಲಸೌಕರ್ಯಗಳ ಮೇಲೆ ಪರಸ್ಪರ ದಾಳಿ ನಡೆಸಿವೆ. ಕೈವ್‌ನಲ್ಲಿರುವ ಪೆಟ್ರೋಲ್ ಬಂಕ್‌ಗಳ ಮೇಲೆ ರಷ್ಯಾ ದಾಳಿ ಮಾಡಿದರೆ, ರಷ್ಯಾದ ತೈಲ ಸಂಸ್ಕರಣಾಗಾರವನ್ನು ಗುರಿಯಾಗಿಸಿಕೊಂಡು ಉಕ್ರೇನ್ ದಾಳಿ ನಡೆಸಿದೆ.  ಕೈವ್ ಮತ್ತು ಉಕ್ರೇನ್‌ನ ಇತರ ನಗರಗಳ ಮೇಲೆ ರಾತ್ರಿಯಿಡೀ ಸುಮಾರು ೨೦೦ ಡ್ರೋನ್‌ಗಳಿಂದ ರಷ್ಯಾ ದಾಳಿ ನಡೆಸಿದ್ದು, ಇಬ್ಬರು ಸಾವನ್ನಪ್ಪಿದ್ದಾರೆ. ಪೆಟ್ರೋಲ್ ಬಂಕ್‌ಗಳ ಜೊತೆಗೆ, ರಷ್ಯಾದ ದಾಳಿಗಳು ಇತರ ಪ್ರದೇಶಗಳಲ್ಲಿನ ಇಂಧನ ಮತ್ತು ಬಂದರು ಮೂಲಸೌಕರ್ಯಗಳ ಮೇಲೂ ಪರಿಣಾಮ ಬೀರಿವೆ ಎಂದು ಉಕ್ರೇನ್ ಅಧಿಕಾರಿಗಳು ತಿಳಿಸಿದ್ದಾರೆ.  ಇನ್ನೊಂದೆಡೆ, ವೋಲ್ಗಾ ನದಿಯ ಉದ್ದಕ್ಕೂ ಇರುವ ರಷ್ಯಾದ ಸಮಾರಾ ಪ್ರದೇಶದ ಸಿಜ್ರಾನ್‌ನಲ್ಲಿರುವ ತೈಲ ಸಂಸ್ಕರಣಾಗಾರಗಳ ಮೇಲೆ ಉಕ್ರೇನ್ ದಾಳಿ ನಡೆಸಿದೆ. ಅಲ್ಲದೇ, ಟ್ಯಾಗನ್‌ರೋಗ್ ಮತ್ತು ಓರಿಯೊಲ್ ಪ್ರದೇಶಗಳಲ್ಲಿ ಡ್ರೋನ್ ಉತ್ಪಾದನೆಯಲ್ಲಿ ತೊಡಗಿರುವ ಸೌಲಭ್ಯಗಳ ಮೇಲೂ ಡ್ರೋನ್ ಮೂಲಕ ದಾಳಿ ನಡೆಸಲಾಗಿದೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ತಿಳಿಸಿದ್ದಾರೆ. ಸೋಮವಾರವಷ್ಟೇ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಾತನಾಡಿ, ರಷ್ಯಾ ಮತ್ತು ಉಕ್ರೇನ್ ಪರಸ್ಪರರ ಇಂಧನ ಮೂಲಸೌಕರ್ಯದ ಮೇಲಿನ ದಾಳಿಗಳನ್ನು ನಿಲ್ಲಿಸಲು ಒಪ್ಪಿಕೊಂಡಿವೆ ಎಂದು ಹೇಳಿದ್ದರು. ಆದರೂ ದಾಳಿಗಳು ಮುಂದುವರಿದಿವೆ.

**<><><*><><<>**

ಭಾರತ-ಅಮೆರಿಕ ಜಂಟಿ ಮಿಲಿಟರಿ ಸಮಾರಾಭ್ಯಾಸ ೨೨ನೇ ಆವೃತ್ತಿ ಯುದ್ಧ್ ಅಭ್ಯಾಸ ನಿನ್ನೆ ಉತ್ತರಾಖಂಡದ ಔಲಿಯಲ್ಲಿ ಪ್ರಾರಂಭವಾಗಿದೆ. ಈ ಮಿಲಿಟರಿ ಸಮಾರಾಭ್ಯಾಸದ ಉದ್ಘಾಟನಾ ಸಮಾರಂಭ ಉತ್ತರಾಖಂಡದ ಔಲಿ ವಿದೇಶಿ ತರಬೇತಿ ನೋಡ್‌ನಲ್ಲಿ ನಡೆಯಿತು. ಈ ಸಮಾರಾಭ್ಯಾಸವನ್ನು ಏಕಕಾಲದಲ್ಲಿ ಉತ್ತರಾಖಂಡದ ಔಲಿ ಮತ್ತು ರಾಜಸ್ಥಾನದ ಮಹಾಜನ್ ಫೀಲ್ಡ್ ಫೈರಿಂಗ್ ರೇಂಜ್‌ನಲ್ಲಿ ನಡೆಸಲಾಗುತ್ತಿದೆ. ಗುಡ್ಡಗಾಡು ಮತ್ತು ಅರೆಗುಡ್ಡಗಾಡು ಪ್ರದೇಶಗಳಲ್ಲಿ ಪರಸ್ಪರ ಸೇನಾ ಸಾಮರ್ಥ್ಯ ವೃದ್ಧಿಸುವ ದಿಸೆಯಲ್ಲಿ ಈ ಸಮರಾಭ್ಯಾಸ ನಡೆಸಲಾಗುತ್ತದೆ. ಡ್ರೋನ್ ಮತ್ತು ಸ್ವಯಂ ಚಾಲಿತ ಕಣ್ಗಾವಲು ವ್ಯವಸ್ಥೆಯನ್ನು ಯೋಜಿಸುವ ನಿಟ್ಟಿನಲ್ಲಿ ಈ ತರಬೇತಿ ನಡೆಯುತ್ತಿದೆ. ಎರಡೂ ದೇಶಗಳ ರಕ್ಷಣಾ ತಜ್ಞರು, ಪರಸ್ಪರ ಮಾಹಿತಿ ಮತ್ತು ತಂತ್ರಜ್ಞಾನಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಲಿದ್ದಾರೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

<><><*><><<>

ಜಾಗತಿಕ ದಕ್ಷಿಣ ರಾಷ್ಟ್ರಗಳಿಗೆ ಸಂಬಂಧಿಸಿದ ವಿಷಯಗಳೂ ಸೇರಿದಂತೆ ಜಾಗತಿಕ ಸವಾಲುಗಳ ಕುರಿತಾದ ತನ್ನ ದೃಷ್ಟಿಕೋನಗಳನ್ನು ಭಾರತ, ಈಗ ಹೆಚ್ಚಿನ ಆತ್ಮವಿಶ್ವಾಸದಿಂದ ವ್ಯಕ್ತಪಡಿಸುತ್ತಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ಹೇಳಿದ್ದಾರೆ. ನವದೆಹಲಿಯಲ್ಲಿ 'ಇಂಡಿಯನ್ ಕೌನ್ಸಿಲ್ ಆಫ್ ವರ್ಲ್ಡ್ ಅಫೇರ್ಸ್'ನ ರಜತ ಮಹೋತ್ಸವ ಸಮಾರಂಭ ಉದ್ದೇಶಿಸಿ ಮಾತನಾಡಿದ ಅವರು, ದೇಶದ ಹಿತಾಸಕ್ತಿಗಳು ಜಾಗತಿಕ ಮಟ್ಟದಲ್ಲಿ ವಿಸ್ತರಿಸಿವೆ. ಜವಾಬ್ದಾರಿಗಳು ಹೆಚ್ಚಿವೆ ಮತ್ತು ಅದಕ್ಕೆ ಅನುಗುಣವಾಗಿ ಭಾರತದ ಮೇಲಿನ ನಿರೀಕ್ಷೆಗಳೂ ಅಧಿಕವಾಗಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ.

<><><*><><<>

ನೇಪಾಳದಲ್ಲಿ ಸಂಭವಿಸಿದ ಹಠಾತ್ ಪ್ರವಾಹದಿಂದಾಗಿ ಮೃತಪಟ್ಟವರ ಸಂಖ್ಯೆ ಒಂದು ಸಾವಿರದ ೩೯೯ಕ್ಕೆ ಏರಿಕೆಯಾಗಿದೆ. ಪೀಡಿತ ಎಂಟು ಜಿಲ್ಲೆಗಳಿಂದ ಇನ್ನೂ ಹೆಚ್ಚಿನ ಮೃತದೇಹಗಳನ್ನು ಹೊರತೆಗೆಯಲಾಗಿದೆ. ಐದು ಸಾವಿರದ ೧೭೦ ಜನರು ಕಾಣೆಯಾಗಿದ್ದು, ಅವರಿಗಾಗಿ ಭದ್ರತಾ ಸಿಬ್ಬಂದಿಯ ಜಂಟಿ ಪಡೆಯು ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಯನ್ನು ಮುಂದುವರಿಸಿದೆ. ಇಲ್ಲಿಯವರೆಗೆ ಒಟ್ಟು ೧೩ ಸಾವಿರದ ೭೪೨ ಜನರನ್ನು ರಕ್ಷಿಸಲಾಗಿದೆ ಎಂದು ನೇಪಾಳದ ಅಧಿಕಾರಿಗಳು ತಿಳಿಸಿದ್ದಾರೆ. ಆಗಸ್ಟ್ ೨೯ ರಂದು ನೇಪಾಳ-ಟಿಬೆಟ್ ಗಡಿಯ ಸಮೀಪ ಸಂಭವಿಸಿದ ಹಿಮ ಮತ್ತು ಬಂಡೆಗಳ ಕುಸಿತದಿಂದ ಉಂಟಾದ ಈ ಹಠಾತ್ ಪ್ರವಾಹವು, ಉತ್ತರ ಮತ್ತು ಮಧ್ಯ ನೇಪಾಳದ ಪಟ್ಟಣಗಳು ಹಾಗೂ ಹಳ್ಳಿಗಳಲ್ಲಿ ಭಾರಿ ಹಾನಿಯನ್ನುಂಟು ಮಾಡಿದೆ. ನೇಪಾಳದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಬಿಡುಗಡೆ ಮಾಡಿದ ಇತ್ತೀಚಿನ ಮಾಹಿತಿಯ ಪ್ರಕಾರ, ಚಿತ್ವಾನ್ ಜಿಲ್ಲೆಯಿಂದ ೩೯೪ ಮೃತದೇಹಗಳು, ನವಾಲ್‌ಪರಸಿ ಪೂರ್ವದಿಂದ ೨೩೨, ನವಾಲ್‌ಪರಸಿ ಪಶ್ಚಿಮದಿಂದ ೨೨೨ ಮತ್ತು ನುವಾಕೋಟ್‌ನಿಂದ ೨೦೨ ಮೃತದೇಹಗಳನ್ನು ಹೊರತೆಗೆಯಲಾಗಿದೆ. ಅದೇ ರೀತಿ, ರಸುವಾದಿಂದ ೧೮೯, ಗೋರ್ಖಾದಿಂದ ೭೮, ಧಾಡಿಂಗ್‌ನಿಂದ ೭೨ ಮತ್ತು ತನಹುನ್‌ನಿಂದ ೩೮ ಮೃತದೇಹಗಳನ್ನು ವಶಪಡಿಸಿಕೊಳ್ಳಲಾಗಿದೆ.

<><><*><><<>

ಹೊಸ ನೇಮಕಾತಿಗಳು ನಡೆಯುವವರೆಗೆ, ನಿವೃತ್ತರಾಗುತ್ತಿರುವ ನ್ಯಾಯಮಂಡಳಿಗಳ ಅಧ್ಯಕ್ಷರು ಮತ್ತು ಸದಸ್ಯರ ಅಧಿಕಾರಾವಧಿಯನ್ನು ಒಂದು ತಿಂಗಳ ಅವಧಿಗೆ ವಿಸ್ತರಿಸುವ ಕುರಿತು ಪರಿಶೀಲಿಸುವಂತೆ ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾರಕ್ಕೆ ಸೂಚನೆ ನೀಡಿದೆ. ಹುದ್ದೆಗಳು ಖಾಲಿಯಿರುವ ಕಾರಣದಿಂದಾಗಿ ನ್ಯಾಯಮಂಡಳಿಗಳು ನಿಷ್ಕ್ರಿಯವಾಗಬಾರದು ಎಂದು ಸರ್ವೋಚ್ಚ ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿಗಳಾದ ಜಾಯ್‌ಮಲ್ಯ ಬಾಗ್ಚಿ ಹಾಗೂ ವಿ.ಮೋಹನಾ ಅವರನ್ನೊಳಗೊಂಡ ನ್ಯಾಯಪೀಠದ ಮುಂದೆ ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಅವರ ಮೂಲಕ ಕೇಂದ್ರ ಸರ್ಕಾರ ತನ್ನ ನಿಲುವು ಮಂಡಿಸಿತು. ಹೊಸ ನೇಮಕಾತಿ ಪ್ರಕ್ರಿಯೆ ಈಗಾಗಲೇ ಆರಂಭಗೊಂಡಿರುವುದರಿಂದ ತಾತ್ಕಾಲಿಕ ವಿಸ್ತರಣೆಗಾಗಿ ಸಲ್ಲಿಸಲಾದ ಇಂತಹ ಮನವಿಗಳನ್ನು ಪರಿಗಣಿಸಬಾರದು ಎಂದು ಸರ್ಕಾರ ಕೋರಿತು. ನ್ಯಾಯಾಧೀಕರಣ ಸುಧಾರಣಾ ಕಾಯ್ದೆ-೨೦೨೪ರ ಅಡಿಯಲ್ಲಿ ವಿವಿಧ ನ್ಯಾಯಮಂಡಳಿಗಳ ೨೪೮ ಸದಸ್ಯರು ಅಧಿಕಾರಾವಧಿ ವಿಸ್ತರಣೆಗೆ ಅರ್ಹರೆಂದು ಗುರುತಿಸಲಾಗಿದೆ ಮತ್ತು ಅವರ ಸೇವೆಯನ್ನು ವಿಸ್ತರಿಸಲಾಗುತ್ತಿದೆ ಎಂದು ಕೇಂದ್ರ ಸರ್ಕಾರ, ಇದೇ ತಿಂಗಳ ೮ ರಂದು ನ್ಯಾಯಪೀಠಕ್ಕೆ ಮಾಹಿತಿ ನೀಡಿತ್ತು.

**<>><><*><><<>**

ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಿನ್ನೆ ರಾತ್ರಿ ನಡೆದ ಎರಡನೇ ಅಂತಾರಾಷ್ಟ್ರೀಯ ಟಿ-೨೦ ಕ್ರಿಕೆಟ್ ಪಂದ್ಯದಲ್ಲಿ ಭಾರತ ತಂಡ, ಅಫ್ಘಾನಿಸ್ತಾನ ತಂಡವನ್ನು ೭ ವಿಕೆಟ್‌ಗಳಿಂದ ಸೋಲಿಸಿತು. ಮೂರು ಪಂದ್ಯಗಳ ಸರಣಿಯಲ್ಲಿ ೨-೦ ಮುನ್ನಡೆ ಸಾಧಿಸುವ ಮೂಲಕ ಸರಣಿ ವಶಪಡಿಸಿಕೊಂಡಿದೆ. ಅಫ್ಘಾನಿಸ್ತಾನ ನೀಡಿದ ೧೬೦ ರನ್‌ಗಳ ಗುರಿಯನ್ನು ಬೆನ್ನಟ್ಟಿದ ಭಾರತ, ೧೪.೫ ಓವರ್‌ಗಳಲ್ಲಿ ೩ ವಿಕೆಟ್ ನಷ್ಟಕ್ಕೆ ೧೬೩ ರನ್ ಗಳಿಸುವ ಮೂಲಕ ಸುಲಭವಾಗಿ ಗೆಲುವು ಸಾಧಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಅಫ್ಘಾನಿಸ್ತಾನ, ನಿಗದಿತ ೨೦ ಓವರ್‌ಗಳಲ್ಲಿ ೮ ವಿಕೆಟ್ ಕಳೆದುಕೊಂಡು ೧೫೯ ರನ್ ಗಳಿಸಿತು. ಅಫ್ಘಾನಿಸ್ತಾನ ತಂಡದ ನಾಯಕ ಇಬ್ರಾಹಿಂ ಝುದ್ರಾನ್ ೩೩ ಎಸೆತಗಳಲ್ಲಿ ೩೭ ರನ್ ಗಳಿಸಿ ತಂಡದ ಪರ ಗರಿಷ್ಠ ಸ್ಕೋರರ್ ಎನಿಸಿಕೊಂಡರು. ಭಾರತದ ಪರ ನಿತೀಶ್ ಕುಮಾರ್ ರೆಡ್ಡಿ ಮೂರು ವಿಕೆಟ್ ಪಡೆದರೆ, ಅರ್ಶದೀಪ್ ಸಿಂಗ್ ಎರಡು ವಿಕೆಟ್ ಕಬಳಿಸಿದರು. ನಿತೀಶ್ ಕುಮಾರ್ ರೆಡ್ಡಿ 'ಪಂದ್ಯ ಶ್ರೇಷ್ಠ' ಪ್ರಶಸ್ತಿಗೆ ಭಾಜನರಾದರು.

ಸರಣಿಯ ಮೂರನೇ ಪಂದ್ಯ ನಾಳೆ ಇದೇ ಕ್ರೀಡಾಂಗಣದಲ್ಲಿ ನಡೆಯಲಿದೆ.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೧೨ ಕ್ಕೆ ><><<>**